
ಸಂಜಾತೆ, ಈಗ ಅಮೆರಿಕದಲ್ಲಿ ನೆಲೆಸಿರುವ ಯುವ ಕವಿ, ಕಾದಂಬರಿಕಾರ್ತಿ, ಕಾವ್ಯಾ ಕಡಮೆ ಅವರ 'ಮಾಕೋನ ಏಕಾಂತ' ಕೃತಿಯ ಕುರಿತು ಹೇಳುತ್ತ ಖ್ಯಾತ ವಿಮರ್ಶಕ ಟಿ.ಪಿ. ಅಶೋಕರು "ಸಿದ್ಧ ಜಾಡನ್ನು ಬಿಟ್ಟು ಹೊಸ ಹೊಸ ಲೋಕಗಳನ್ನು ಅನ್ವೇಷಿಸುವ ದಿಟ್ಟತನ, ಕಾವ್ಯಕ್ಕೆ ಸಮೀಪವೆನ್ನಿಸುವಂಥ ಭಾಷಾ ಬಳಕೆ, ಕಥೆಗಿಂತ ಕಥನಕ್ಕೆ ನೀಡಿರುವ ಪ್ರಾಮುಖ್ಯತೆಗಳಿಂದಾಗಿ ಕಾವ್ಯಾರ ಈ ಬರಹಗಳು ವಿಶಿಷ್ಟವಾಗಿವೆ" ಎನ್ನುತ್ತಾರೆ.

ಹೀಗೆ ದಕ್ಷಿಣ ಭಾರತದಲ್ಲಿ ಹೊಮ್ಮುತ್ತಿರುವ ಅನೇಕ ಮಹಿಳಾ ದನಿಗಳನ್ನು ಪ್ರತಿನಿಧಿಸುವ ಸ್ವರಗಳು ಭಾರತದಾದ್ಯಂತ ಕೇಳಿಬರುತ್ತಿವೆ. ಸಂತೋಷವೆಂದರೆ, ಸದಾ ಅವಜ್ಞೆಗೆ ಒಳಗಾದಂತಿದ್ದ ಈಶಾನ್ಯ ರಾಜ್ಯಗಳ ಸುಶಿಕ್ಷಿತ ಯುವ ಪೀಳಿಗೆಯ ಅನನ್ಯ ಲೇಖಕಿಯರು ಗಮನ ಸೆಳೆಯುತ್ತಿದ್ದಾರೆ. ಅರುಣಾಚಲ ಪ್ರದೇಶದ ಮೌಖಿಕ ಸಂಪ್ರದಾಯಗಳು, ಸ್ಮೃತಿ, ಇತಿಹಾಸ, ಮಾನವ-ಪ್ರಕೃತಿ ನಂಟುಗಳನ್ನು ಸಂಭ್ರಮಿಸುವಂಥ ಕೃತಿಗಳನ್ನು ಆಂಗ್ಲ ಭಾಷೆಯಲ್ಲಿ ಬರೆಯುವ ಮಾಂಗ್ ದಾಯಿ ನೀಡುತ್ತಿದ್ದಾರೆ. 2014ರಲ್ಲಿ ಪ್ರಕಟವಾದ ಅವರ 'ಬ್ಲಾಕ್ ಹಿಲ್' ಎಂಬ ಐತಿಹಾಸಿಕ ಕಾದಂಬರಿಗೆ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ದೊರೆತಿದೆ. ಪ್ರಾದೇಶಿಕ ಸಮುದಾಯಗಳು ಮತ್ತು ವಸಾಹತುಶಾಹಿ ಬಲಗಳ ನಡುವಿನ ಬೆರೆಯುವಿಕೆ, ಸಂಘರ್ಷಗಳ ಕುರಿತ ಕಾದಂಬರಿಯದು.




ಆಂಗ್ಲ ಭಾಷೆಯಲ್ಲಿ ಬರೆದ ಮೊಟ್ಟ ಮೊದಲ ನಾಗಾ ಕಾದಂಬರಿ ಎಂಬ ಹೆಗ್ಗಳಿಕೆಗೆ ಪಾತ್ರವಾಗಿರುವ 'ಎ ನಾಗಾ ವಿಲೇಜ್ ರಿಮೆಂಬರ್ಡ್' (2003) ಲೇಖಕಿ ಈಸ್ಟರೀನ್ ಕಿರೆ, ತನ್ನ ಬರಹಗಳ ಮೂಲಕ ನಾಗಾಲ್ಯಾಂಡಿನ ಇತಿಹಾಸ, ಸಂಪ್ರದಾಯಗಳ ಮರು ನಿರೂಪಣೆ ಮಾಡುತ್ತ ತನ್ನ ಜನರ ಉಳಿವು, ಸಂಘರ್ಷ, ಆಧ್ಯಾತ್ಮಿಕತೆ, ಶಾಂತಿಯ ಹಂಬಲಗಳನ್ನು ತೆರೆದಿಡುತ್ತಾರೆ. ಇವರ 'ವೆನ್ ದ ರಿವರ್ ಸ್ಲೀಪ್ಸ್' (2014) ಕಾದಂಬರಿಗೆ ದಿ ಹಿಂದೂ ಸಾಹಿತ್ಯ ಪ್ರಶಸ್ತಿ ಸಂದಿದೆ.

ರಾಜಕೀಯ ಹಿತಾಸಕ್ತಿಗಳ ನಡುವಿನ ಪೈಪೋಟಿಗೆ ಸಿಲುಕಿಕೊಂಡು ನಲುಗುತ್ತಿರುವ, ತನ್ನ ಅಪಾರ ಪ್ರಕೃತಿ ಸೌಂದರ್ಯವೆಲ್ಲವೂ ಹಿನ್ನೆಲೆಗೆ ಸರಿದು ಅದು ಅನುಭವಿಸುತ್ತಿರುವ ಹಿಂಸೆ, ರಾಜಕಾರಣ, ಸಂದಿಗ್ಧಗಳೇ ಢಾಳಾಗಿ ಕಾಣುತ್ತಿರುವ ಕಾಶ್ಮೀರದ ಕೆಲ ಯುವ ಲೇಖಕಿಯರು ತಮ್ಮ ದನಿಗೆ ಪುಷ್ಟಿ ನೀಡುತ್ತಿದ್ದಾರೆ. 'ಝುರೀನ್ ಝುಕಮ್' (2018) ಎಂಬ ತನ್ನ ಕಾವ್ಯ ಸಂಕಲನಕ್ಕೆ ಸಾಹಿತ್ಯ ಅಕಾಡೆಮಿಯ ಯುವ ಪುರಸ್ಕಾರ ಪಡೆದಿರುವ ಧೀಬಾ ನಾಜಿರ್ ತಮ್ಮ ಕವಿತೆಗಳಲ್ಲಿ ಕಾಶ್ಮೀರಿ ಜನರ ಅಸ್ತಿತ್ವ, ನೆಲೆ ತಪ್ಪುವಿಕೆ, ಅಸ್ಥಿರತೆಗಳ ಕುರಿತು ಹೇಳುತ್ತ ಕಾಶ್ಮೀರದ ಸಾಮಾಜಿಕ-ರಾಜಕೀಯ ತಲ್ಲಣಗಳನ್ನು ಓದುಗರ ಮುಂದಿಡುತ್ತಾರೆ. ಹದಿನಾಲ್ಕು ವರ್ಷದ ಬಾಲೆ ಅಬೀದಾ ರಿಯಾಜ್ ತನ್ನ ಹನ್ನೆರಡನೆಯ ವಯಸ್ಸಿನಲ್ಲೇ 'ಝೀಲ್ ಆಫ್ ಪೆನ್' (2021) ಎಂಬ ಇಂಗ್ಲಿಷ್ ಕವನ ಸಂಕಲನವನ್ನು ಪ್ರಕಟಿಸಿ, ಜಮ್ಮು ಕಾಶ್ಮೀರದ ಅತ್ಯಂತ ಕಿರಿಯ ಲೇಖಕಿ ಎಂಬ ಪ್ರಸಿದ್ಧಿ ಪಡೆದಿದ್ದಾಳೆ. ಆಕೆಯ ಕವನಗಳು ಕಾಶ್ಮೀರಿ ಯುವ ತಲೆಮಾರಿನ ಆಶೋತ್ತರಗಳು, ಸವಾಲುಗಳು, ಮತ್ತು ಬದುಕನ್ನು ಅವರು ಅರ್ಥೈಸಿಕೊಳ್ಳುತ್ತಿರುವ ದೃಷ್ಟಿಕೋನಗಳ ಕುರಿತು ಬೆಳಕು ಚೆಲ್ಲುತ್ತವೆ.

ಭಾರತದ ರಾಷ್ಟ್ರ ಭಾಷೆಯಾಗಿ ಕೇಂದ್ರ ಸರ್ಕಾರದಿಂದ ಪಟ್ಟ ಸಿಕ್ಕಿದ್ದರೂ ವಿವಾದಕ್ಕೊಳಗಾಗಿ ತನ್ನಿಂದ ಜನಿಸಿದ ಉಪ ಭಾಷೆಗಳ ಸಹಿತವೇ ಉತ್ತರ ಭಾರತದಲ್ಲಿ ಚಾಲ್ತಿಯಲ್ಲಿರುವ ಹಿಂದಿಯಲ್ಲಿ ಅನೇಕ ಖ್ಯಾತನಾಮರು ಸಾಹಿತ್ಯದಲ್ಲಿ ತೊಡಗಿಕೊಂಡದ್ದು ತಿಳಿದೇ ಇದೆ. ಪ್ರಸ್ತುತ ಬರೆಯುತ್ತಿರುವ ಲೇಖಕಿಯರಲ್ಲಿ ಹೆಸರಿಸಬಹುದಾದಂಥವರು ಗೀತಾಂಜಲಿಶ್ರೀ ಮತ್ತು ಅಲ್ಕಾ ಸರೋಗಿ. 'ತಾಯ್ತನ'ದ ಸಂಕೀರ್ಣತೆಯನ್ನು ವಿಶ್ಲೇಷಿಸುವ ಕಾದಂಬರಿ 'ಮಾಯಿ' (1993) ಮೂಲಕ ಪ್ರಸಿದ್ಧರಾದ ಗೀತಾಂಜಲಿಶ್ರೀ ತಮ್ಮ 'ರೇತ್ ಸಮಾಧಿ' (2018) ಎಂಬ ಹಿಂದಿ ಕಾದಂಬರಿಗೆ ಅಂತರರಾಷ್ಟ್ರೀಯ ಬೂಕರ್ ಪ್ರಶಸ್ತಿ ಗಳಿಸಿದರು. ಹಿಂದಿಯಲ್ಲಿ ಈ ಪ್ರಶಸ್ತಿ ಬಂದ ಮೊದಲ ಕಾದಂಬರಿ ಎಂಬ ಹಿರಿಮೆ ಇದಕ್ಕೆ ದೊರೆಯಿತು. ವಿಭಜನೆಯ ಕಾಲದಲ್ಲಿ ಪಾಕಿಸ್ತಾನದಿಂದ ಬೇರ್ಪಟ್ಟು ಇಂಡಿಯಾಕ್ಕೆ